# 4

# ಸಭಾ ಹಿರಿಯರ ಅರ್ಹತೆಗಳು ಮತ್ತು ನೇಮಿಸುವಿಕೆ

ಕರ್ತನ ಸಭೆಯ ಒಂದು ಸ್ಥಳಿಕ ಸಭೆಯು ದೇವರು ತಮಗೆ ಕೊಡುವ ಪಾತ್ರವನ್ನು ನೆರವೇರಿಸಲು ಹಿರಿಯರನ್ನು ಹೇಗೆ ಪಡೆದು ಕೊಳ್ಳುವುದು? ಸಾಧ್ಯವಾದಷ್ಟು ಕೆಲವೇ ಮಾತುಗಳಲ್ಲಿ ಹೇಳಬಹುದು, (1) ಜನರು ಸ್ಥಾನಕ್ಕಾಗಿ ಅರ್ಹರಾಗಿರತಕ್ಕದ್ದು, ಮತ್ತು (2) ಅವರು ಕೆಲಸಕ್ಕಾಗಿ ನೇಮಿಸಲ್ಪಡತಕ್ಕದ್ದು. ಅರ್ಹರಾಗಲು ಅವರಿಗೆ ಏನು ತೆಗೆದು ಕೊಳ್ಳಲ್ಪಡುವುದು? ಅರ್ಹರಾದವರು ಹೇಗೆ ನೇಮಿಸಲ್ಪಡತಕ್ಕದ್ದು? ಬೈಬಲಿನ ನಾಯಕತ್ವದ ಯಾವುದೇ ಚರ್ಚೆಯಲ್ಲಿ, ಈ ಎರಡು ಪ್ರಶ್ನೆಗಳು ಉತ್ತರಿಸಲ್ಪಡ ಬೇಕಾದ ಅಗತ್ಯತೆಯಿದೆ.

## ಸಭಾ ಹಿರಿಯರ ಅರ್ಹತೆಗಳು

ಸ್ಥಳಿಕ ಸಭೆಯಲ್ಲಿ ಹಿರಿಯತನದ ವಿಷಯ ಬರುವಾಗಲೆಲ್ಲಾ, ಅತೀ ಹೆಚ್ಚಾಗಿ ಚರ್ಚಿಸಲ್ಪಟ್ಟ ಪ್ರಶ್ನೆಗಳು ಹಿರಿಯರ ಅರ್ಹತೆಗಳನ್ನು ಸಂಬಂಧಿಸಿದವುಗಳಾಗಿರುತ್ತವೆ. ಸಭಾ ಹಿರಿಯನಿಗೆ ಒಂದಕ್ಕಿಂತ ಹೆಚ್ಚು ಮಕ್ಕಳಿರ ಬಹುದೋ? ಅವನ ಎಲ್ಲಾ ಮಕ್ಕಳೂ ನಂಬಿಗಸ್ತ ಕ್ರೈಸ್ತರಾಗಿರಬೇಕೋ? ಅವನ ಹೆಂಡತಿಯು ಸತ್ತು ಹೋದರೆ ಅವನು ರಾಜೀನಾಮೆ ಕೊಡಬೇಕೋ? "ಅರ್ಹತೆಗಳೊಂದಿಗೆ" ನಮ್ಮ ಮುಂದಾಲೋಚನೆಯು ಮತ್ತು ಸಭಾ ಹಿರಿಯರ ಕೆಲಸದ ಬಗ್ಗೆ ನಮ್ಮ ಸಂಬಂಧದ ಬಗ್ಗೆ ಚಿಂತನೆಯಿಲ್ಲದಿರುವುದು ಬಲಹೀನ ಪ್ರಾಧಾನ್ಯತೆಗಳನ್ನು ಸೂಚಿಸುತ್ತದೆ. ಹೀಗಿದ್ದರೂ, ಒಬ್ಬನನ್ನು ಸಭಾ ಹಿರಿಯನನ್ನಾಗಿ ನೇಮಿಸುವದಕ್ಕೆ ಅವನಿಗಾಗಿ ಏನು ತೆಗೆದು ಕೊಳ್ಳುತ್ತದೆ ಎಂಬುದನ್ನು ತಿಳಿದು ಕೊಳ್ಳಲಿಕ್ಕೆ ನಾವು ದೇವರ ಮಾರ್ಗದರ್ಶನವನ್ನು ಹುಡುಕುವ ಅಗತ್ಯತೆ ಇರುತ್ತದೆ.

### ಅರ್ಹತೆಗಳು ಯಾದಿ ಮಾಡಲ್ಪಟ್ಟಿವೆ

ಸಭಾ ಹಿರಿಯರ ಅರ್ಹತೆಗಳು ಪರಿಶುದ್ಧ ಬರಹದ ಎರಡು ವಾಕ್ಯ ಭಾಗಗಳಲ್ಲಿ ಕೊಡಲ್ಪಟ್ಟಿವೆ. ಮೊದಲನೆಯದು 1 ತಿಮೊಥೆ 3:2-7, ಇದಕ್ಕೆ ಮುನ್ನುಡಿಯಾಗಿ, "ಸಭಾಧ್ಯಕ್ಷನ ಉದ್ಯೋಗವನ್ನು ಪಡಕೊಳ್ಳಬೇಕೆಂದಿರುವವನು ಒಳ್ಳೇ ಕೆಲಸವನ್ನು ಅಪೇಕ್ಷಿಸುವವನಾಗಿದ್ದಾನೆಂಬ ಮಾತು ನಂಬತಕ್ಕದ್ದಾಗಿದೆ" ಎಂಬ ಹೇಳಿಕೆಯಿಂದಿರುತ್ತದೆ. (NRSV: "ಬಿಷಪನ ಹುದ್ದೆಯನ್ನು ಅಪೇಕ್ಷಿಸುವವನು ಒಳ್ಳೆಯ ಕೆಲಸಕ್ಕಾಗಿ ಬಯಸುವನು: ಈ ಹೇಳಿಕೆಯು ಸತ್ಯವಾಗಿದೆ"; KJV: "ಒಬ್ಬ ಮನುಷ್ಯನು ಬಿಷಪನ ಹುದ್ದೆಯನ್ನು ಅಪೇಕ್ಷಿಸಿದರೆ ಅವನು ಒಳ್ಳೆಯ ಕೆಲಸವನ್ನು ಅಪೇಕ್ಷಿಸುತ್ತಾನೆ.") ಒಬ್ಬನು ಹಿರಿಯನಾಗುವದಕ್ಕೆ "ಅಪೇಕ್ಷಿಸುವುದು" ಇಲ್ಲವೇ ಇಚ್ಛಿಸುವಂಥದ್ದು ಸಭಾಹಿರಿಯನಾಗಲಿಕ್ಕೆ ಅರ್ಹತೆಗಳಲ್ಲಿ ಒಂದಾಗಿದೆ ಎಂದು ಅನೇಕರನ್ನು ನಂಬುವದಕ್ಕೆ ನಡಿಸಿದೆ. ಇದು ಹಾಗಿರಲಾರದು. ಹೀಗಿದ್ದರೂ, ಒಬ್ಬ ಮನುಷ್ಯನು ಹಿರಿಯನಾಗಿ ಸೇವೆ ಮಾಡಲಿಕ್ಕೆ ಮನಸ್ಸುಳ್ಳವನಾಗಿರಬೇಕು - ಆ ಕೆಲಸಕ್ಕೆ ಅವನು ನೇಮಿಸಲ್ಪಡುವದಕ್ಕಿಂತ ಮೊದಲು ಅಷ್ಟರ ಮಟ್ಟಿಗೆ ಅವನು "ಹುದ್ದೆಯನ್ನು ಅಪೇಕ್ಷಿ ಸುವವನಾಗಿರತಕ್ಕದ್ದು."

ಸಭಾ ಹಿರಿಯನು ಹೊಂದಿರ ಬಹುದಾದ ಇತರ ಗುಣಲಕ್ಷಣಗಳನ್ನು ಪೌಲನು ನಮೂದಿಸುತ್ತ ಹೋಗಿದ್ದಾನೆ. ಸ್ಪಷ್ಟತೆಗಾಗಿ ಬದಲೀ ಭಾಷಾಂತರಗಳೂ ಕೂಡಿಸಲ್ಪಟ್ಟಿವೆ.[1]

1. *"ದೋಷಾರೋಪಣೆಯಿಲ್ಲದವನು";* KJV - "ದೋಷವಿಲ್ಲದವನು"; ASV - "ದೋಷಾ ರೋಪಣೆ ರಹಿತನು"; Knox - "ಯಾವುದೇ ತಪ್ಪು ಕಂಡು ಹಿಡಿಯಲ್ಪಡದವನು"; Phi - "ದೂಷಣೆಯಿಲ್ಲದ ಗೌರವವುಳ್ಳವನು"; Tay - "ಅವನ ಜೀವನಕ್ಕೆ ಯಾವುದೂ ವಿರುದ್ಧವಾಗಿ ಮಾಡಲ್ಪಡದೇ ಇರುವಂಥದ್ದು; RSV, NIV, NRSV - "ದೋಷಾರೋಪಣೆಯಿಲ್ಲದವನು."

2. *"ಏಕ ಪತ್ನಿಯುಳ್ಳವನು";* KJV, RSV - "ಏಕಪತ್ನಿಯುಳ್ಳವನು"; Wms - "ಒಬ್ಬಳೇ ಹೆಂಡತಿ ಇರತಕ್ಕದ್ದು"; NEB - "ತನ್ನ ಒಬ್ಬಳೇ ಹೆಂಡತಿಗೆ ನಂಬಿಗಸ್ತನಾಗಿರುವುದು"; Mof, NRSV - "ಒಂದು ಸಲ ಮಾತ್ರ ಮದುವೆ ಯಾದವನು"; NIV - "ಒಬ್ಬಳೇ ಹೆಂಡತಿಯ ಗಂಡನು."

3. *"ಮದ್ಯಾಸಕ್ತಿಯಿಲ್ಲದವನು, ಜಿತೇಂದ್ರಿಯನು, ಮಾನಸ್ಥನು";* KJV - "ಎಚ್ಚರವುಳ್ಳ ವನು, ಶಾಂತಚಿತ್ತನು, ಒಳ್ಳೆಯ ನಡತೆಯುಳ್ಳವನು"; RSV - "ಮದ್ಯಾಸಕ್ತಿಯಿಲ್ಲದವನು, ವಿವೇಕವುಳ್ಳವನು, ಗೌರವವುಳ್ಳವನು"; ASV - "ಮದ್ಯಾಸಕ್ತಿಯಿಲ್ಲದವನು, ಸ್ವಸ್ಥಚಿತ್ತನು, ಗೌರವವುಳ್ಳವನು"; NASB - "ಮದ್ಯಾಸಕ್ತಿಯಿಲ್ಲದವನು, ಜಿತೇಂದ್ರಿಯನು, ಮಾನಸ್ಥನು"; NIV - "ಮದ್ಯಾಸಕ್ತಿಯಿಲ್ಲದವನು, ಜಿತೇಂದ್ರಿಯನು, ಮಾನಸ್ಥನು"; NRSV - "ಮದ್ಯಾಸಕ್ತಿಯಿಲ್ಲದವನು, ವಿವೇಕವುಳ್ಳವನು, ಗೌರವವುಳ್ಳವನು."

4. *"ಅತಿಥಿ ಸತ್ಕಾರ ಮಾಡುವವನು";* KJV - "ಅತಿಥಿ ಸತ್ಕಾರ ಮಾಡುವವನು"; Bas - "ಅತಿಥಿಗಳಿಗೆ ತನ್ನ ಮನೆಯನ್ನು ಉಚಿತವಾಗಿ ತೆರೆದಿರುವವನು"; AIf, RSV, NIV, NRSV - "ಅತಿಥಿ ಸತ್ಕಾರ ಮಾಡುವವನು."

5. *"ಬೋಧಿಸುವದರಲ್ಲಿ ಪ್ರವೀಣನು";* KJV, NIV - "ಬೋಧಿಸಲು ಆಸಕ್ತಿಯು ಳ್ಳವನು"; RSV, NRSV - "ಸರಿಯಾದ ಬೋಧಕನು"; Con - "ಬೋಧಿಸುವದರಲ್ಲಿ ನಿಪುಣನು"; Wey - "ಬೋಧಿಸುವ ವರವುಳ್ಳವನು"; Ber - "ಬೋಧಿಸಲು ಅರ್ಹನು"; NEB - "ಒಳ್ಳೆ ಬೋಧಕನು."

6. *"ಮದ್ಯಾಸಕ್ತಿಯಿಲ್ಲದವನು ಇಲ್ಲವೆ ಜಗಳಗಂಟನಾಗದವನು";* KJV - "ಮದ್ಯಾಸಕ್ತಿಯಿಲ್ಲದವನು, ಹೊಡೆದಾಡದವನು"; RSV - "ಮದ್ಯಪಾನ ಮಾಡದವನು, ಉಗ್ರನಾಗಿರದವನು"; ASV - "ಜಗಳ ಮಾಡದವನು, ಹೊಡೆದಾಡದವನು"; NASB - "ಮದ್ಯಾಸಕ್ತಿಯಿಲ್ಲದವನು ಇಲ್ಲವೇ ಹೊಡೆದಾಡದವನು"; NIV - "ಮದ್ಯಾಸಕ್ತಿಯಿಲ್ಲದವನು, ಉಗ್ರನಾಗಿರದವನು ಆದರೆ ದೀನನಾಗಿರುವವನು"; NRSV - "ಕುಡುಕನಲ್ಲ, ಉಗ್ರನಲ್ಲ."

7. *"ಸಾತ್ವಿಕನೂ, ಕುತರ್ಕಮಾಡದವನೂ, ದ್ರವ್ಯಾಶೆಯಿಲ್ಲದವನೂ";* KJV - "ತಾಳ್ಮೆಯುಳ್ಳವನು, ಜಗಳವಾಡದವನು, ಆಶೆಪಡದವನು"; RSV, NRSV - "ಸಾತ್ವಿಕನು, ಜಗಳಗಂಟನಾಗಿರದವನು, ಮತ್ತು ದ್ರವ್ಯಾಶೆಯಿಲ್ಲದವನು"; ASV - "ಸಾತ್ವಿಕನು, ಕುತರ್ಕ ಮಾಡದವನು, ದ್ರವ್ಯಾಶೆಯಿಲ್ಲದವನು"; NEB - "ಸ್ಥಾನ ಕಳೆದು ಕೊಳ್ಳುವದನ್ನು ಸಹಿಸಿಕೊಳ್ಳುವವನು, ಜಗಳಗಳನ್ನು ತಪ್ಪಿಸಿಕೊಳ್ಳುವವನು"; Phi - "ಚರ್ಚಾಸ್ಪದವಾ ಗದವನು ಇಲ್ಲವೇ ಹಣವನ್ನು ದೋಚಿ ಕೊಳ್ಳುವದನ್ನು ಮೆಚ್ಚದವನು"; NIV - "ಜಗಳವಾ ಡದವನು, ದ್ರವ್ಯಾಶೆಯಿಲ್ಲದವನು."

8. *"ಸ್ವಂತ ಮನೆಯವರನ್ನು ಚೆನ್ನಾಗಿ ಆಳುವವನು";* KJV - "ತನ್ನ ಸ್ವಂತ ಮನೆಯನ್ನು ಚೆನ್ನಾಗಿ ಆಳುವವನು"; RSV, NRSV - "ತನ್ನ ಮನೆಯನ್ನು ಚೆನ್ನಾಗಿ ನಡಿಸುವವನು"; Con - "ತನ್ನ ಮನೆಯನ್ನು ಚೆನ್ನಾಗಿ ಆಳುವವನು"; Mof - "ತನ್ನ ಮನೆಯನ್ನು ಚೆನ್ನಾಗಿ ನಡಿಸಲು ಶಕ್ತನಾಗಿರುವವನು"; Beck - "ತನ್ನ ಕುಟುಂಬವನ್ನು ಚೆನ್ನಾಗಿ ನಡಿಸುವವನಾಗಿರಬೇಕು"; NIV - "ತನ್ನ ಕುಟುಂಬವನ್ನು ಚೆನ್ನಾಗಿ ನಡಿಸತಕ್ಕದ್ದು."

9. *“ಪೂರ್ಣ ಗೌರವದಿಂದ ತನ್ನ ಮಕ್ಕಳನ್ನು ಅಧೀನದಲ್ಲಿಟ್ಟುಕೊಂಡವನು”;* KJV - “ಎಲ್ಲಾ ಗಂಭೀರತೆಯಲ್ಲಿ ಅವನ ಮಕ್ಕಳು ಅಧೀನರಾಗಿರಬೇಕು”; Wey - “ನಿಜವಾದ ಗೌರವದೊಂದಿಗೆ ತನ್ನ ಮಕ್ಕಳನ್ನು ನಿಯಂತ್ರಣದಲ್ಲಿಟ್ಟು ಕೊಳ್ಳುವವನು”; RSV, NRSV - “ಪ್ರತಿಯೊಂದು ರೀತಿಯಲ್ಲಿ ತನ್ನ ಮಕ್ಕಳನ್ನು ಅಧೀನತೆಯುಳ್ಳವರನ್ನಾಗಿ ಮತ್ತು ಗೌರವವುಳ್ಳವರನ್ನಾಗಿ ಇಟ್ಟು ಕೊಳ್ಳುವುದು”; TCNT - “ಅವನ ಮಕ್ಕಳನ್ನು ನಿಯಂತ್ರಣದಲ್ಲಿ ಮತ್ತು ಚೆನ್ನಾದ ನಡತೆಯಲ್ಲಿ ಇಟ್ಟು ಕೊಳ್ಳವುದು”; NIV - “ಯೋಗ್ಯ ಮರ್ಯಾದೆಯಿಂದ ಅವನ ಮಕ್ಕಳು ಅವನಿಗೆ ವಿಧೇಯರಾಗುವವರಾಗಿರಬೇಕು.”

10. *“ಹೊಸದಾಗಿ ಸಭೆಯಲ್ಲಿ ಸೇರಿದವನಾಗಿರಬಾರದು”;* KJV - “ಅನುಭವ ಇಲ್ಲದವನಾಗಿರಬಾರದು”; ASV - “ಹೊಸದಾಗಿ ಸಭೆಯಲ್ಲಿ ಸೇರಿದವನಾಗಿರಬಾರದು”; Tay - “ಹೊಸ ... ಕ್ರೈಸ್ತನಾಗಿರಬಾರದು”; Mon, RSV, NIV, NRSV - “ಇತ್ತೀಚೆಗೆ ಮಾರ್ಪಾಟ ಹೊಂದಿದವನಾಗಿರ ಬಾರದು.”

11. *“ಹೊರಗಿನವರಿಂದ ಒಳ್ಳೆಯವನೆನಸಿಕೊಂಡಿರಬೇಕು”;* KJV - “ಹೊರಗಿನವರಿಂದ ಒಳ್ಳೆಯ ವರದಿ ಹೊಂದಿದವನಾಗಿರಬೇಕು”; RSV, NRSV - “ಹೊರಗಿನವರಿಂದ ಒಳ್ಳೆಯದಾಗಿ ವಿಚಾರಿಸಲ್ಪಟ್ಟವನು”; TCNT - ಹೊರಗಿನವರಿಂದ ಚೆನ್ನಾಗಿ ಮಾತಾಡಲ್ಪಟ್ಟವನು”; NEB - “ಕ್ರೈಸ್ತೇತರ ಜನ ಸಮೂಹದಿಂದ ಒಳ್ಳೆಯ ಗೌರವ ಪಡೆಯುತ್ತಿರುವವನಾಗಿರಬೇಕು”; NIV - “ಹೊರಗಿನವರಿಂದ ಒಳ್ಳೆ ಯವನೆನಸಿಕೊಂಡಿರಬೇಕು.”

ತೀತ 1:5-9ರಲ್ಲಿ ಈ ಕೆಳಗಿನ ಅರ್ಹತೆಗಳು ಕಂಡು ಬರುತ್ತವೆ:

1. *“ನಿಂದಾರಹಿತನು”;* KJV, NIV, RSV- “ದೋಷವಿಲ್ಲದವನು”; TCNT - “ದೋಷಾರೋಪಣೆ ಮಾಡದ ಗುಣವುಳ್ಳವನು”; Phi - “ಪ್ರಶ್ನಿಸಲಾಗದ ಪ್ರಾಮಾಣಿಕತೆಯುಳ್ಳವನು”; Nor - “ನಿಂದಾರಹಿತವಾದ ಗೌರವವುಳ್ಳವನು.”

2. *“ನಂಬಿಕೆಯುಳ್ಳ ಮಕ್ಕಳುಳ್ಳವನಾಗಿರಬೇಕು”;* KJV - “ನಂಬಿಕೆಯುಳ್ಳ ಮಕ್ಕಳುಳ್ಳವನಾಗಿರಬೇಕು”; RSV - “ಅವನ ಮಕ್ಕಳು ನಂಬಿಕೆಯುಳ್ಳವರಾಗಿರಬೇಕು”; ASV - “ನಂಬುವಂಥ ಮಕ್ಕಳುಳ್ಳವನಾಗಿರಬೇಕು”; Knox - “ಅವನ ಮಕ್ಕಳು ನಂಬಿಕೆಯನ್ನು ಹಿಡಿದವರಾಗಿರಬೇಕು”; TCNT - “ಅವನ ಮಕ್ಕಳು ಕ್ರೈಸ್ತರಾಗಿರಬೇಕು”; NIV - “ಅವನ ಮಕ್ಕಳು ನಂಬುವವರಾಗಿರಬೇಕು”; NRSV - “ಅವನ ಮಕ್ಕಳು ನಂಬಿದವರಾಗಿರಬೇಕು.”

3. *“ಅವನ ಮಕ್ಕಳು ದುರ್ಮಾರ್ಗಸ್ಥರೆನಿಸಿಕೊಂಡವರಾಗಲಿ ಅಧಿಕಾರಕ್ಕೆ ಒಳಗಾಗದವರಾಗಲಿ ಆಗಿರಬಾರದು”;* KJV - (ನಂಬಿಗಸ್ತರಾದ ಮಕ್ಕಳುಳ್ಳವನಾಗಿರ ಬೇಕು) “ಅವರು ದಂಗೆಖೋರರೂ ನಿಯಂತ್ರಣದಲ್ಲಿ ಇಲ್ಲದವರೂ ಆಗಿರಬಾರದು”; RSV - “ಘಟಿಂಗರು, ಅವಿಧೇಯರು ಎಂಬ ದೂರಿಗೆ ಒಳಗಾಗದವರು”; Phi - “ವ್ಯಭಿಚಾರಿಗಳು, ಕಾನೂನು ಉಲ್ಲಂಘಿಸುವವರು ಎಂಬ ದೂರು ಹೊಂದದಿರುವವರು”; NIV - “ಕ್ರೂರರೂ ಅವಿಧೇಯರೂ ಎಂಬ ದೂರು ಹೊಂದದಿರುವವರು”; NRSV - “ಜಾರತ್ವದ ದೂರು ಹೊಂದದವರು ಮತ್ತು ದಂಗೆ ಖೋರರಲ್ಲದವರು.”

4. *“ಸ್ವೇಚ್ಛಾಪರನೂ, ಮುಂಗೋಪಿಯೂ ಆಗಿರಬಾರದು”;* KJV - “ಮುಂಗೋಪಿಯಾಗಿರಬಾರದು, ಬೇಗನೇ ಸಿಟ್ಟಿಗೇಳುವವನಾಗಿರಬಾರದು”; RSV, NRSV - “ಹಟಮಾರಿಯೂ ಇಲ್ಲವೇ ಮುಂಗೋಪಿಯೂ ಆಗಿರಬಾರದು”; NEB - “ಗರ್ವಿಯೂ, ಶೀಘ್ರ ಕೋಪಿಯೂ ಆಗಿರಬಾರದು”; Knox - “ಹಟಮಾರಿಯೂ ಇಲ್ಲವೇ ಜಗಳಗಂಟನೂ ಆಗಿರಬಾರದು”; NIV - “ಗರ್ವಿಯೂ, ಶೀಘ್ರಕೋಪಿಯೂ ಆಗಿರಬಾರದು.”

5. *“ಮದ್ಯಾಸಕ್ತಿಯಿಲ್ಲದವನು, ಜಗಳಗಂಟನಾಗದವನು”;* KJV - “ಮದ್ಯಾಸಕ್ತಿಯಿಲ್ಲದವನು, ಹೊಡೆದಾಡದವನು”; Mof, RSV - “ಮದ್ಯಾಪಾನ ಮಾಡದವನು ಇಲ್ಲವೇ ಉಗ್ರನಾಗಿರದವನು”; Con - “ಮದ್ಯವನ್ನು ಪ್ರೀತಿಸದವನು, ಜಗಳ

ಮಾಡದವನು"; NIV - "ಅತಿಶಯವಾಗಿ ಮದ್ಯಪಾನ ಮಾಡದವನು, ಹೊಡೆದಾಡದವನು"; NRSV - ಮದ್ಯಾಸಕ್ತಿಯಿಲ್ಲದವನು ಇಲ್ಲವೇ ಉಗ್ರನಾಗಿರದವನು."

6. *"ನೀಚಲಾಭವನ್ನು ಅಪೇಕ್ಷಿಸದವನು";* KJV - "ಅಸಹ್ಯ ಆದಾಯ ಬಯಸದವನು"; RSV, NRSV - "ಲಾಭಕ್ಕಾಗಿ ಆಶೆಪಡದವನು"; Nor - "ಅಪ್ರಾಮಾಣಿಕ ಲಾಭಕ್ಕಾಗಿ ಆಶೆಪಡದವನು"; TCNT - "ಇಲ್ಲವೇ ಪ್ರಶ್ನಾರ್ಥಕವಾದ ಹಣ ಮಾಡುವವನು"; Mof - "ಕದ್ದುಕೊಳ್ಳುವ ಹವ್ಯಾಸವುಳ್ಳವನಾಗಿರಬಾರದು"; NIV - "ಅಪ್ರಮಾಣಿಕವಾದ ಲಾಭಕ್ಕಾಗಿ ಬೆನ್ನಟ್ಟುವವನಾಗಿರಬಾರದು."

7. *"ಅತಿಥಿ ಸತ್ಕಾರ ಮಾಡುವವನು, ಒಳ್ಳೆಯದನ್ನು ಪ್ರೀತಿಸುವವನು";* KJV - "ಅತಿಥಿ ಸತ್ಕಾರ ಮಾಡುವವನು, ಒಳ್ಳೇ ಜನರನ್ನು ಪ್ರೀತಿಸುವವನು"; RSV, NRSV - "ಅತಿಥಿ ಸತ್ಕಾರ ಮಾಡುವವನು, ಒಳ್ಳೆಯದನ್ನು ಪ್ರೀತಿಸುವವನು"; Bas - "ಅತಿಥಿಗಳಿಗೆ ತನ್ನ ಮನೆಯನ್ನು ತೆರೆದಿರುವವನು, ಒಳ್ಳೆಯದನ್ನು ಪ್ರೀತಿಸುವವನು"; NEB - "ಅತಿಥಿ ಸತ್ಕಾರ ಮಾಡುವವನು, ಒಳ್ಳೇ ಮನಸ್ಸುಳ್ಳವನು"; NIV - "ಅತಿಥಿ ಸತ್ಕಾರ ಮಾಡುವವನು, ಒಳ್ಳೆಯದಾಗಿರುವದನ್ನು ಪ್ರೀತಿಸುವವನು."

8. *"ಸ್ವಸ್ಥ ಚಿತ್ತನು, ನ್ಯಾಯವಂತನು, ದೇವಭಕ್ತನು ಜಿತೇಂದ್ರಿಯನು";* KJV - "ಸ್ವಸ್ಥ ಚಿತ್ತವುಳ್ಳವನು, ನ್ಯಾಯವಂತನು, ಭಕ್ತಿವಂತನು, ಜಿತೇಂದ್ರಿಯನು"; RSV - "ಸ್ವಸ್ಥ ಚಿತ್ತನು, ನೀತಿವಂತನು, ಪರಿಶುದ್ಧನು ಮತ್ತು ಜಿತೇಂದ್ರಿಯನು"; TCNT - "ವಿವೇಕವುಳ್ಳ ವನು, ನೀತಿವಂತನು, ಪರಿಶುದ್ಧ ಜೀವನದ ಮನುಷ್ಯನು"; NIV - "ಜಿತೇಂದ್ರಿಯನು, ನ್ಯಾಯವಂತನು, ಪರಿಶುದ್ಧನು ಮತ್ತು ಸುಶಿಕ್ಷಿತನು"; NRSV - "ವಿವೇಕವುಳ್ಳವನು, ನ್ಯಾಯವಂತನು, ಭಕ್ತಿವಂತನು, ಮತ್ತು ಜಿತೇಂದ್ರಿಯನು."

9. *"ಕ್ರಿಸ್ತಬೋಧಾನುಸಾರವಾದ ನಂಬತಕ್ಕ ವಾಕ್ಯವನ್ನು ದೃಢವಾಗಿ ಹಿಡಿದು ಕೊಂಡವನು";* KJV - "ಅವನು ಬೋಧಿಸಲ್ಪಟ್ಟಂಥ ನಂಬಿಗಸ್ತ ವಾಕ್ಯವನ್ನು ದೃಢ ವಾಗಿ ಹಿಡಿದು ಕೊಂಡವನು"; RSV - "ಬೋಧಿಸಲ್ಪಟ್ಟಂಥ ನಿಶ್ಚಿತವಾದ ವಾಕ್ಯವನ್ನು ದೃಢ ವಾಗಿ ಹಿಡಿದುಕೊಂಡಿರತಕ್ಕದ್ದು"; Wms - "ನಂಬಲರ್ಹವಾದ ಸಂದೇಶಕ್ಕೆ ಸತತವಾಗಿ ಅಂಟಿಕೊಂಡಿರುವವನು ..."; NIV - "ಅವನಿಗೆ ಬೋಧಿಸಲ್ಪಟ್ಟಂಥ ನಂಬಲರ್ಹವಾದ ಸಂದೇಶವನ್ನು ದೃಢವಾಗಿ ಹಿಡಿದು ಕೊಂಡಿರಬೇಕು"; NRSV - "ಬೋಧನೆಗನುಗುಣವಾಗಿ ನಂಬಲರ್ಹವಾದ ವಾಕ್ಯವನ್ನು ದೃಢವಾಗಿ ಅರ್ಥಮಾಡಿಕೊಂಡಿರಬೇಕು."

ಈ ಅರ್ಹತೆಗಳು ಹಲವಾರು ಶಿರೋನಾಮಗಳಲ್ಲಿ ಗುಂಪಾಗಿರಿಸಲ್ಪಡಬಹುದು. ಡಿಕ್ ಮಾರ್ಸಿಯರನು ಅವುಗಳಲ್ಲಿ ಆರು ಗುಂಪುಗಳನ್ನು ನೋಡಿದನು:

> 1. *ಸಾಮಾಜಿಕ ಗುಣಗಳು.* ಅವನು "ದೋಷಾರೋಪಣೆಯಿಲ್ಲದವನಾಗಿರ ಬೇಕು" (1 ತಿಮೊಥೆ 3:2). ಅವನ ಗುಣದ ಬಗ್ಗೆ ಯಾರಾದರೂ ವಿರೋಧಿಸಿದರೆ, ಯಾರೂ ನಂಬದಷ್ಟು ಅವನು ಒಳ್ಳೆಯವನೆಂದು ತಿಳಿಯಲ್ಪಡಬೇಕು. ಅವನು "ಹೊರಗಣವರಿಂದ ಒಳ್ಳೆಯವನೆನಿಸಿಕೊಂಡಿರಬೇಕು" (1 ತಿಮೊಥೆ 3:7). ಸಭಾ ಹಿರಿಯನಾಗಿ ಸೇವೆ ಮಾಡುವವನು ವಿಶ್ವಾಸಿಗಳೊಂದಿಗೆ ಅಷ್ಟೇಅಲ್ಲ, ಸಭೆಯ ಹೊರಗೆ ಇರುವವರ ಗೌರವಕ್ಕೆ ಪಾತ್ರನಾದವನೂ ಆಗಿರತಕ್ಕದ್ದು.
>
> 2. *ನಡತೆಯ ಗುಣಗಳು.* ಅವನು "ಮದ್ಯಾಸಕ್ತಿಯಿಲ್ಲದವನೂ, ಜಿತೇಂದ್ರಿಯನೂ ಮಾನಸ್ಥನೂ" ಆಗಿರುವನು (1 ತಿಮೊಥೆ 3:2). "ಅವನು ಕುಡಿದು ಜಗಳವಾಡುವ ವನಾಗಿರಬಾರದು" (1 ತಿಮೊಥೆ 3:3). ...
>
> 3. *ಮಾನಸಿಕ ಗುಣಗಳು.* ಅವನು "ಸುಶಿಕ್ಷಿತ"ನಾಗಿರಬೇಕು (ತೀತ 1:8). ಅವನು "ಬೋಧಿಸಲು ಶಕ್ತನಾಗಿರಬೇಕು" (1 ತಿಮೊಥೆ 3:2). ಒಬ್ಬನು ಬೋಧಿಸುವ ಮೊದಲು ಬೋಧಿಸಲ್ಪಡತಕ್ಕದ್ದು. ... ತನ್ನ ಜ್ಞಾನದಿಂದ ಮತ್ತು ಮಾನಸಿಕ ಶಕ್ತಿಯಿಂದ

"ಸ್ವಸ್ಥ ಬೋಧನೆಯಿಂದ ಇತರರನ್ನು ಪ್ರೋತ್ಸಾಹಿಸಲು" ಅವನು ಶಕ್ತನಾಗಿರತಕ್ಕದ್ದು (ತೀತ 1:9).

4. *ವ್ಯಕ್ತಿತ್ವದ ಗುಣಗಳು.* ಒಬ್ಬನಲ್ಲಿ ಎಲ್ಲಾ "ಸಂಗತಿಗಳು" ಇರಬಹುದು. ಆದರೆ ಅವನು ತನ್ನ ಜೀವಿತದಲ್ಲಿ ಕ್ರಿಸ್ತನನ್ನು ತೋರಿಸಲು ಶಕ್ತನಾಗದಿದ್ದರೆ, ಅವನು ದೇವರು ಬಯಸುವ ನಾಯಕನಾಗಿರಲಾರನು. ಅವನು "ಸಾತ್ವಿಕನೂ ... ಜಗಳವಾಡದವನೂ" ಆಗಿರಬೇಕು (1 ತಿಮೊಥೆ 3:3). ಅವನು "ನಿಂದಾರಹಿತನಾಗಿರಬೇಕು, ಮುಂಗೋಪಿಯೂ, ... ಹೊಡೆದಾಡುವವನಾದರೂ ಆಗಿರಬಾರದು" (ತೀತ 1:7).

5. *ಕುಟುಂಬ ಗುಣಗಳು.* "ಸ್ವಂತ ಮನೆಯವರನ್ನು ಆಳುವದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಮರಿಸುವನು?" ಎಂಬುದು ಪೌಲನ ಪ್ರಶ್ನೆಯಾಗಿತ್ತು (1 ತಿಮೊಥೆ 3:5). ...

6. *ಅನುಭವದ ಗುಣಗಳು.* ಅವನು "ಹೊಸದಾಗಿ ಸಭೆಯಲ್ಲಿ ಸೇರಿದವನಾಗಿರಬಾರದು" (1 ತಿಮೊಥೆ 3:6). "ಹೊಸದಾಗಿ ಮಾರ್ಪಾಟಾದವನಾಗಿರಬಾರದು" ಎಂದು NIV ಹೇಳುತ್ತದೆ. ಬೀಜವು ಬೇರು ಬಿಡತಕ್ಕದ್ದು, ಸಸಿಯಾಗಿ ಬೆಳೆಯಬೇಕು, ಆಮೇಲೆ ಫಲ ಫಲಿಸಬೇಕು. ಒಬ್ಬ ಸಭಾ ಹಿರಿಯನು ಬೆಳೆಯಲಿಕ್ಕೆ ಸಮಯ ತೆಗೆದು ಕೊಳ್ಳುತ್ತದೆ.[2]

## ಅರ್ಹತೆಗಳನ್ನು ಅನ್ವಯಿಸುವುದು

ಎರಡು ಯಾದಿಗಳನ್ನು ಕುರಿತು ಪ್ರಶ್ನೆಗಳಿರುತ್ತವೆ. ಪೌಲನ ದಿನಗಳಲ್ಲಿಯೂ ಈ ಗುಣಲಕ್ಷಣಗಳು "ಅರ್ಹತೆಗಳಂತೆ" ತಿಳಿಯಲ್ಪಡ ಬೇಕಾಗಿದ್ದವೋ ಎಂಬುದರ ಬಗ್ಗೆ ಕೆಲವರು ಸಂಶಯಪಡುತ್ತಾರೆ. ಅವು ಮೊದಲನೆಯ ಶತಮಾನದಲ್ಲಿ ಹಿರಿಯರಿಗಾಗಿ ಅಗತ್ಯತೆಯಾಗಿದ್ದವು, ಆದರೆ ಇಂದು ಅಗತ್ಯವಾಗಿರುವದಿಲ್ಲ ಎಂದು ಕೆಲವರು ನಂಬುತ್ತಾರೆ, ತಿಮೊಥೆ ಮತ್ತು ತೀತನಲ್ಲಿರುವ ಯಾದಿಗಳು ನಿರ್ದಿಷ್ಟವಾಗಿ ಒಪ್ಪಿಕೊಳ್ಳದಿರುವುದರಿಂದ, ಅವು ಅಧಿಕೃತ ಅರ್ಹತೆಗಳ ಕಠಿಣವಾದ ಯಾದಿಗಳಂತೆ ಇರದೇ ಅವರು ಸಾಮಾನ್ಯವಾದ ಮಾರ್ಗದರ್ಶನಗಳಂತೆ ಇಲ್ಲವೇ ಸೂಚನೆಗಳಂತೆ ಉಪಯೋಗಿಸಲ್ಪಟ್ಟಿರ ಬೇಕೆಂದು ಹೆಚ್ಚಾದವರು ನಂಬುತ್ತಾರೆ. ಒಬ್ಬನು ಹಿರಿಯನಾಗಲಿಕ್ಕೆ ಅಗತ್ಯವಾದ ಅರ್ಹತೆಗಳನ್ನು ಯಾದಿಗಳು ಕೊಡುತ್ತವೆ ಎಂದು ನಂಬುವವರಲ್ಲಿಯೂ ಭಿನ್ನಭಿಪ್ರಾಯಗಳಿರುತ್ತವೆ. "ನಂಬುವ ಮಕ್ಕಳು ಇರಬೇಕು" ಎಂಬುದರ ಅರ್ಥವೇನು? "ಒಬ್ಬ ಹೆಂಡತಿಯ ಗಂಡನಾಗಿರಬೇಕು" ಎಂಬುದರ ಅರ್ಥವೇನು? ಒಬ್ಬ ಹಿರಿಯನು ಯಾವಾಗ "ಬೋಧಿಸಲು ಶಕ್ತನಾಗಿರುವನು"?

ಸಭಾ ಹಿರಿಯರ ಅರ್ಹತೆಗಳನ್ನು ಕುರಿತು ವಾದವಿವಾದಗಳಿರುವಾಗ, ಸಭೆಯು ಏನನ್ನು ಮಾಡಬೇಕು? ಈ ಪ್ರಶ್ನೆಗಳೊಂದಿಗೆ ಹೋರಾಡುವಾಗ, ಕ್ರೈಸ್ತರಿಗೆ ಸಹಾಯವಾಗಲು ಈ ಕೆಳಗಿನ ಕೆಲವು ಗಮನಿಸುವಿಕೆಗಳು ಮತ್ತು ಸೂಚನೆಗಳು ಕೊಡಲ್ಪಟ್ಟಿವೆ.

*ಮೊದಲನೆಯ ಅರ್ಹತೆಯು* - ಉಳಿದೆಲ್ಲವುಗಳಿಗಿಂತ ಹೆಚ್ಚು ಮಹತ್ವವುಳ್ಳದ್ದು - ಸಭಾ ಹಿರಿಯನು ನಂಬಿಗಸ್ತ ಕ್ರೈಸ್ತನಾಗಿರುವುದಾಗಿದೆ. ಒಂದು ಸಭೆಯು "ಅವನು ಕರ್ತನ ಸಭೆಯ ನಂಬಿಗಸ್ತ ಸದಸ್ಯನಾಗಿರುವನೋ?" ಎಂದು ಕೇಳುವದನ್ನು ಮರೆತು ಬಿಡುವಷ್ಟು ಇತರ ಪ್ರಶ್ನೆಗಳನ್ನು ಚರ್ಚಿಸುವಲ್ಲಿ ಒಂದು ಸಭೆಯು ಒಳಗೊಂಡಿರ ಬಹುದು.

*ಕೆಲವು ಸಲ, ಮಂದೆಯನ್ನು ನಡಿಸಲು ಹಿರಿಯನ ಸಾಮರ್ಥ್ಯಕ್ಕೆ ಸಂಬಂಧಿಸಿರದವುಗಳನ್ನು ಬಹಳ ಮಹತ್ವದ ಅರ್ಹತೆಗಳೆಂದು ನಾವು ತಿಳಿಯುವಂತೆ ತೋರುತ್ತದೆ.* ಇತರವುಗಳನ್ನು ಮರೆತು ಬಿಡುವಂತೆ ಕೆಲವು ಅರ್ಹತೆಗಳ ಮೇಲೆ ಬಹಳ ವಾಗಿ ಕೇಂದ್ರೀಕರಿಸಿದ್ದಿರೋ.

*ಈ ಗುಣಗಳಲ್ಲಿ ಹೆಚ್ಚಾದವುಗಳು ಪ್ರತಿಯೊಬ್ಬ ಕ್ರೈಸ್ತನಿಂದ ಪ್ರದರ್ಶಿಸಲ್ಪಡಬೇಕು.* ಸಭಾ ಹಿರಿಯನು ಇತರ ಕ್ರೈಸ್ತರಿಗಿಂತ ಹೆಚ್ಚಿನ ಮಟ್ಟದಲ್ಲಿ ತಿಳಿಯಲ್ಪಡಬಾರದು, ಅವನು ಹೆಚ್ಚಿನ ರೀತಿಯಲ್ಲಿ, ಒಬ್ಬ ನಂಬಿಗಸ್ತ ಕ್ರೈಸ್ತನಾಗಿದ್ದು, ಇತರ ಕ್ರೈಸ್ತರು ಇನ್ನೂ ಪ್ರಯತ್ನಿಸುತ್ತಿರುವ ಆತ್ಮಿಕ

ಪ್ರೌಢಾವಸ್ಥೆಯ ಮಟ್ಟವನ್ನು ತಲುಪಿರುವನು.

*ಅನೇಕ ಅರ್ಹತೆಗಳು ಹಂತಗಳ ವಿಷಯವಾಗಿರುವವು,* ನಾವೆಲ್ಲರೂ ಪಾಪ ಮಾಡುವವದರಿಂದ ಹಾಗೂ ತಪ್ಪುಗಳನ್ನು ಮಾಡುವವದರಿಂದ, ಸಭಾಹಿರಿಯನು ನೂರಕ್ಕೆ ನೂರರಷ್ಟು "ಸ್ವಸ್ಥ ಬುದ್ಧಿಯುಳ್ಳವನೂ, ಗೌರವವುಳ್ಳವನೂ, ಭಕ್ತಿಯುಳ್ಳವನೂ ಮತ್ತು ಜಿತೇಂದ್ರಿಯನೂ" ಆಗಿರುವದನ್ನು ನಿರೀಕ್ಷಿಸಬಹುದೋ? ಒಟ್ಟಾಗಿ ನೂರಕ್ಕೆ ನೂರರಷ್ಟು ಭಕ್ತಿಯಿಂದಿರುವುದು ಯಾವುದರಂತಿರುವುದು? ಹೀಗೆ ಸಭಾ ಹಿರಿಯನಿಗೆ, ಇಲ್ಲವೇ ಇತರ ಯಾವುದೇ ಸದಸ್ಯನಿಗೆ, ಈ ಯಾವುದೇ ಗುಣಲಕ್ಷಣಗಳು ಪರಿಪೂರ್ಣವಾಗಿರುವಂತೆ ನಿರೀಕ್ಷಿಸಲಾರೆವು ಅವು ಹಿರಿಯನಲ್ಲಿ ಹೆಚ್ಚಿನ ಮಟ್ಟಿಗೆ, ಸಾಧ್ಯವಾದ ಮಟ್ಟದಲ್ಲಿರವಂತೆ ನಿರೀಕ್ಷಿಸಬಹುದು. ಇದರ ಅರ್ಥ ಅರ್ಹತೆಗಳು ಮಹತ್ವವಾದವುಗಳಲ್ಲಿ ಎಂದು ತಿಳಿದುಕೊಳ್ಳಬಾರದು. ಅರ್ಹತೆಗಳು ಅಂತಸ್ತುಗಳ ವಿಷಯವಾಗಿದ್ದರೂ, *ಹಿರಿಯರು ಗಮನಾರ್ಹವಾಗಿ ಅವುಗಳನ್ನು ಹೊಂದಿರತಕ್ಕದ್ದು.*

*ಅರ್ಹತೆಗಳ ಹಿಂದಿರುವ ಉದ್ದೇಶಕ್ಕಾಗಿ ನಾವು ನೋಡತಕ್ಕದ್ದು.* ಕೆಲವು ಉದಾಹರಣೆಗಳಲ್ಲಿ ಉದ್ದೇಶವು ಕೊಡಲ್ಪಟ್ಟಿದೆ. ಹಿರಿಯನು "ತನ್ನ ಮನೆಯವರನ್ನು ಚೆನ್ನಾಗಿ ಆಳುವವನಾಗಿರಬೇಕು ..." (1 ತಿಮೊಥೆ 3:4). ಯಾಕೆ? "ಸ್ವಂತ ಮನೆಯವರನ್ನು ಆಳುವದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಮರಿಸುವನು?" (1 ತಿಮೊಥೆ 3:5). ಅವನು "ಹೊಸದಾಗಿ ಸಭೆಗೆ ಸೇರಿದವನಾಗಿರಬಾರದು" ಯಾಕೆ? ಅಂಥವನಾದರೆ, ಅವನು "ಉಬ್ಬಿಕೊಂಡು ಸೈತಾನನಿಗೆ ಪ್ರಾಪ್ತವಾದ ಶಿಕ್ಷಾವಿಧಿಗೆ ಒಳಗಾದಾನು" (1 ತಿಮೊಥೆ 3:6). ಅವನು, "ಹೊರಗಣವರಿಂದ ಒಳ್ಳೆ ಯವನೆನಿಸಿಕೊಂಡಿರಬೇಕು" ಯಾಕೆ? "ಇಲ್ಲದಿದ್ದರೆ ನಿಂದೆಗೆ ಗುರಿಯಾಗುವನು, ಮತ್ತು ಸೈತಾನನ ಉರ್ಲಿನೊಳಗೆ ಸಿಕ್ಕಿ ಬಿದ್ದಾನು" (1 ತಿಮೊಥೆ 3:7). ಅವನು "ನಂಬತಕ್ಕ ವಾಕ್ಯವನ್ನು ದೃಢವಾಗಿ ಹಿಡಿದು ಕೊಂಡವನಾಗಿರಬೇಕು." ಯಾಕೆ? "ಸ್ವಸ್ಥ ಬೋಧ ನೆಯಿಂದ ಜನರನ್ನು ಎಚ್ಚರಿಸುವದಕ್ಕೂ ಎದುರಿಸುವವರ ಬಾಯಿಕಟ್ಟುವದಕ್ಕೂ ಶಕ್ತನಾಗಿರುವನು" (ತೀತ 1:9). ಉದ್ದೇಶವು ಸ್ಪಷ್ಟಪಡಿಸಲ್ಪಡದಿದ್ದರೂ, ಅದನ್ನು ನಿರ್ಧರಿಸಲು ನಾವು ಪ್ರಯತ್ನಿಸಬೇಕು.

ಪ್ರತಿಯೊಂದು ಅರ್ಹತೆಗಾಗಿ ಕಾರಣವನ್ನು ಯೋಚಿಸುವುದು ನಮ್ಮ ತೀರ್ಮಾನಗಳ ಮೇಲೆ ಪರಿಣಾಮ ಮಾಡಬಹುದು. ಉದಾಹರಣೆಯಾಗಿ, ಅರ್ಹತೆಯ ಹಿಂದಿರುವ ಉದ್ದೇಶವನ್ನು ಯೋಚಿಸುವುದು ನಂಬಿಕೆಯುಳ್ಳ ಮಕ್ಕಳಿರುವ ಅಗತ್ಯತೆಯು (ತೀತ 1:6) ಒಂದು ಮಗುವಿನ ತಂದೆಯಾಗಿರಲು ಮನುಷ್ಯನ ಸಾಮರ್ಥ್ಯದ ಬಗ್ಗೆ ಸಂಬಂಧಿಸಿರುವದಲ್ಲವೆಂದು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು, ಹೀಗೆ ದತ್ತು ತೆಗೆದು ಕೊಂಡ ಮಗುವನ್ನು (ಇಲ್ಲವೇ ಮಕ್ಕಳನ್ನು) ಅಥವಾ ಪೋಷಿಸುವ ಮಗುವನ್ನು (ಇಲ್ಲವೇ ಮಕ್ಕಳನ್ನು) ದೇವರ ಚಿತ್ತಕ್ಕೆ ತಕ್ಕಂತೆ ನಡಿಸುವಂತೆ ಜೀವಿಸಲು ಆ ಅಗತ್ಯತೆಯಿರುವುದು.

*ಈ ಅರ್ಹತೆಗಳ ಬಗ್ಗೆ ಎರಡು ಅತಿರೇಕಗಳನ್ನು ತಪ್ಪಿಸಿಕೊಳ್ಳುವ ಅಗತ್ಯತೆ ನಮಗಿದೆ: ಅವುಗಳನ್ನು ಯಾವ ಮನುಷ್ಯನೂ ಎಂದಿಗೂ ಅರ್ಹನಾಗುವದಿಲ್ಲ, ಮತ್ತು "ಯಾವುದಾದರೂ ನಡೆಯುತ್ತದೆ" ಎಂದು ಹೇಳುವದಕ್ಕೆ ಅಷ್ಟು ಕಠಿಣವಾಗಿ ಅನ್ವಯಿಸುವುದು.* ಒಬ್ಬನು ಹಿರಿಯನಾಗಲು ಪರಿಪೂರ್ಣನಾಗಿರಬೇಕು ಮತ್ತು ಎಂದೂ ತಪ್ಪು ಮಾಡದವನಾಗಿರಬೇಕು ಎಂದು ಸ್ಪಷ್ಟವಾಗಿ ನಂಬುವದರಿಂದ ಕೆಲವರು ಅಸಾಧ್ಯ ವಾದ ಮಟ್ಟಗಳನ್ನು ಮುಂದಿಡುತ್ತಾರೆ. ಇದರ ಅರ್ಥ, ಬೈಬಲಿನ ಸಮಯದಲ್ಲಾಗಲೀ ಇಲ್ಲವೇ ಇಂದಿನ ಸಮಯದಲ್ಲಾಗಲೀ ಎಂದೂ ಯಾವುದೇ ಮನುಷ್ಯನು ಅರ್ಹನಾಗುವದಿಲ್ಲ ಎಂದಾಗುತ್ತದೆ. ಒಬ್ಬ ಹಿರಿಯನು "ಬೋಧಿಸಲು ಪ್ರವೀಣನಾಗಿರ ಬೇಕಾದದ್ದರಿಂದ" ಮುಂದೆ ಹಿರಿಯನಾಗುವವನು ಒಳ್ಳೆಯ ಪ್ರಸಂಗಿ ಇಲ್ಲವೇ ಬೋಧಕನು ಆಗಿರಬೇಕೆಂದು ಕೆಲವರು ನಂಬುತ್ತಾರೆ.

ಇತರರಿಗೆ ಯಾವುದೇ ಮಟ್ಟಗಳೇ ಇರುವದಿಲ್ಲ. ಒಬ್ಬ ಕ್ರೈಸ್ತ ಮನುಷ್ಯನು ಮದುವೆಯಾಗಿ,

ಬಾಪ್ತಿಸ್ಮ ಹೊಂದಿದ ಮಕ್ಕಳುಳ್ಳವನಾದರೆ, ಅವನಿಗೆ ಅರ್ಹತೆಗಳು ಇರಲಿ ಇಲ್ಲವೇ ಇರದಿರಲಿ, ಅವನು ಯಾಂತ್ರಿಕವಾಗಿ ಒಬ್ಬ ಹಿರಿಯನಾಗಲು ಅರ್ಹನಾಗಿರುವನೆಂದು ಅವರು ಯೋಚಿಸುವಂತೆ ತೋರುತ್ತದೆ; ಅವರು "ಕೆಲಸದಲ್ಲಿ ಬೆಳೆಯುವರು" ಎಂಬ ವಿಚಾರದೊಂದಿಗೆ ಸ್ಥಳಿಕ ಸಭೆಗಳು ಅರ್ಹತೆಯಿಲ್ಲದ ಜನರನ್ನು ಹಿರಿಯರ ಸ್ಥಾನದಲ್ಲಿಡ ಬಹುದು. ಕೆಲವು ಸ್ಥಳಿಕ ಸಭೆಗಳಲ್ಲಿ, ಆತ್ಮಿಕ ಗುಣಗಳನ್ನು ಗಮನಿಸದೇ ಹಿರಿಯ ತನಕ್ಕೆ ಪ್ರಸಿದ್ಧಿ ಪಡೆದವರಿಗಾಗಲೀ ಇಲ್ಲವೇ ಸಮಾಜದಲ್ಲಿ ಪ್ರಭಾವವುಳ್ಳವರಿಗಾಗಲೀ ಬಹುಮಾನವಾಗಿ ಕೊಡಲ್ಪಡುತ್ತದೆ.

ಒಂದು ಕಡೆಯಲ್ಲಿ, ಅತಿಶಯವಾದ ಖಂಡನೆಗಳನ್ನು ಅನ್ವಯಿಸುವ ಮತ್ತು ಇನ್ನೊಂದು ಕಡೆಯಲ್ಲಿ, ಎಲ್ಲಾ ಮಿತಿಗಳನ್ನು ಕಡೆಗಣಿಸುವ, ಈ ಎರಡು ಅತಿರೇಕಗಳ ಮಧ್ಯದಲ್ಲಿ, ಸಭೆಯು ಪರಿಪೂರ್ಣರಾಗಿರದ ಜನರನ್ನು, ಆದರೆ ಹಿರಿಯರಾಗಲು ನಿಜವಾಗಿಯೂ ಅರ್ಹತೆಯುಳ್ಳವರನ್ನು ಕಂಡುಕೊಳ್ಳುವ ಮತ್ತು ನೇಮಿಸುವ ಮಧ್ಯಮ ನೆಲೆಯಿರುವುದು.

*ಅಂತ್ಯದಲ್ಲಿ ಹಿರಿಯತನಕ್ಕಾಗಿ ಯಾರು ಅರ್ಹತೆಯುಳ್ಳವರಾಗಿರುವರು ಎಂಬುದನ್ನು ನಿರ್ಧರಿಸಲು ಸ್ಥಳಿಕ ಸಭೆಗೆ ನಾವು ಬಿಟ್ಟುಕೊಡತಕ್ಕದ್ದು.* ಸ್ಥಳಿಕ ಸಭೆಯ ಸ್ವಾಯತ್ತತೆಗೆ ಅರ್ಥವಿರುವುದಾದರೆ, ಅದಕ್ಕೆ ಈ ರೀತಿ ಮಾಡಲು ಹಕ್ಕು ಇರುವುದೆಂದು ಅರ್ಥವಾಗುತ್ತದೆ: (1) "ನಂಬಿಕೆಯುಳ್ಳ ಮಕ್ಕಳುಳ್ಳವನಾಗಿರುವುದು," "ಒಬ್ಬಳೇ ಹೆಂಡತಿಯ ಗಂಡನಾಗಿರುವುದು" ಮತ್ತು "ಬೋಧಿಸಲು ಪ್ರವೀಣನಾಗಿರುವುದು" ಎಂಬುದರ ಅರ್ಥವೇ ನೆಂಬುದರ ಬಗ್ಗೆ ತನ್ನ ಸ್ವಂತ ತೀರ್ಮಾನ ಮಾಡುವುದು ಹಾಗೂ ಇತರ ಅರ್ಹತೆಗಳ ಯಾವುದನ್ನು ಒಳಗೊಂಡಿರುವವೆಂಬುದನ್ನು ನಿರ್ಣಯಿಸುವ ಹಕ್ಕನ್ನು ಹೊಂದಿರುವುದು, ಮತ್ತು (2) ಆ ಅರ್ಹತೆಗಳ ತನ್ನ ತಿಳುವಳಿಕೆಗೆ ಅನುಗುಣವಾಗಿ ಮತ್ತು ಅದರ ಬಗ್ಗೆ ತನ್ನ ಸ್ವಂತ ಸದಸ್ಯರ ತಿಳುವಳಿಕೆಗೆ ಅನುಗುಣವಾಗಿ ಜನರನ್ನು ಸಭಾ ಹಿರಿಯರಂತೆ ಆಯ್ದು ಕೊಳ್ಳುವುದು ಮತ್ತು ನೇಮಿಸುವುದು.

**ನಾಯಕತ್ವದ ಅರ್ಹತೆಗಳೊಂದಿಗೆ ಹಿರಿಯರ ಅರ್ಹತೆಗಳನ್ನು ಹೋಲಿಸುವುದು**

ಇಂದು ಶಿಫಾರಸು ಮಾಡಲ್ಪಟ್ಟಿರುವ ನಾಯಕತ್ವದ ಗುಣಲಕ್ಷಣಗಳೊಂದಿಗೆ ಈ ಅರ್ಹತೆಗಳು ಹೇಗೆ ಹೋಲಿಸಲ್ಪಡುತ್ತವೆ? ಜೇಮ್ಸ್ ವಿಲ್‌ಬರ್ನ್[3] ತನ್ನ ಪುಸ್ತಕದಲ್ಲಿ ಹತ್ತು "ನಾಯಕತ್ವದ ಗುಣಲಕ್ಷಣಗಳನ್ನು" ಚರ್ಚಿಸಿದ್ದಾನೆ: (1) ನಾಯಕತ್ವದ ಅಪೇಕ್ಷೆ, (2) ಆಸಕ್ತಿ, (3) ಸ್ವ - ಭರವಸೆ, (4) ದೀನತೆ, (5) ಬೆಳವಣಿಗೆಯ ಚಟ, (6) ದೃಷ್ಟಿ, (7) ಜ್ಞಾನ, (8) ಹಂಚಿಕೊಳ್ಳುವ ಭಾವನೆ, (9) ಕಲ್ಪನೆ, (10) ದೃಢ ನಿರ್ಧಾರ. ಕೆನ್ನೆತ್ ಗಾಂಗೆಲ್ ತನ್ನ ಪುಸ್ತಕದಲ್ಲಿ "ಐದು ನಾಯಕತ್ವದ ಪ್ರಾಥಮಿಕ ಮತ್ತು ಆರು ದ್ವಿತೀಯ ಅಂಶಗಳನ್ನು" ಯಾದಿ ಮಾಡಿದ ಇನ್ನೊಂದು ಮೂಲವನ್ನು ಉಲ್ಲೇಖಿಸಿದ್ದಾನೆ:

> ... ಗ್ರಂಥ ಕರ್ತರು ... ಪ್ರಾಥಮಿಕ ಗುಣಗಳನ್ನು ಸಹಾನುಭೂತಿ, ಗುಂಪು ಸದಸ್ಯತ್ವ, ವಿಚಾರಣೆ, ಕೋಲಾಹಲ (ಮಾತುಗಾರಿಕೆ, ಹರ್ಷದಿಂದಿರುವುದು, ಸ್ನೇಹಪರನಾಗಿರುವುದು, ಆಸಕ್ತಿಯಿಂದಿರುವುದು, ವ್ಯಕ್ತಪಡಿಸುವುದು, ಎಚ್ಚರಿಕೆಯಿಂದಿರುವುದು, ಮೂಲಭೂತತೆ) ಮತ್ತು ಮಾನಸಿಕ ಸ್ಥಿರತೆ ಎಂದು ವಿವರಿಸುತ್ತಾರೆ.
>
> ದ್ವಿತೀಯ ಗುಣಲಕ್ಷಣಗಳ ಯಾದಿಯು ನಾಯಕತ್ವಕ್ಕಾಗಿ ಆಸಕ್ತಿ, ಬುದ್ಧಿವಂತಿಕೆ, ಸಾಮರ್ಥ್ಯ, ಸ್ಥಿರತೆ, ಸ್ವ-ಭರವಸೆ ಮತ್ತು ನಾಯಕತ್ವವನ್ನು ಹಂಚಿಕೊಳ್ಳಲು ಸಾಮರ್ಥ್ಯ ಇವುಗಳನ್ನು ಒಳಗೊಂಡಿರುತ್ತದೆ.[4]

1 ತಿಮೊಥೆ ಮತ್ತು ತೀತರಲ್ಲಿ ಕೊಡಲ್ಪಟ್ಟ ಯಾದಿಗಳೊಂದಿಗೆ ಈ ಯಾದಿಗಳನ್ನು ಹೋಲಿಸುವಾಗ, ಹೋಲಿಕೆಗಳಿಗಿಂತ ಭಿನ್ನತೆಗಳು ಹೆಚ್ಚಾಗಿರುತ್ತವೆ.[5] ಉದಾಹರಣೆಯಾಗಿ, ಪೌಲನು ಹಿರಿಯರ ಬಗ್ಗೆ ಅವರು ಆಸಕ್ತಿಯುಳ್ಳವರು, ಕಲ್ಪಿಸುವುದು, ಸ್ವ-ಭರವಸೆ, ದೃಷ್ಟಿ, ಬುದ್ಧಿವಂತಿಕೆ

ಇಲ್ಲವೇ ವ್ಯಕ್ತಪಡಿಸುವಿಕೆ ಇವುಗಳುಳ್ಳವರಾಗಿರಬೇಕೆಂದು ಏನನ್ನೂ ಹೇಳಲಿಲ್ಲ ಇದಲ್ಲದೇ, ವ್ಯಾಪಾರದಲ್ಲಿ, ಪಂದ್ಯಗಳಲ್ಲಿ ಇಲ್ಲವೇ ಮಿಲಿಟರಿಯಲ್ಲಿ ನಾವು ಗಮನಿಸಿದಂತೆ ನಾಯಕತ್ವದ ಗುಣಲಕ್ಷಣಗಳನ್ನು ನಾವು ಯಾದಿ ಮಾಡಲು ಪ್ರಯತ್ನಿಸಿದರೆ, ಯಾವ ಗುಣಲಕ್ಷಣಗಳನ್ನು ನಾವು ಕೂಡಿಸುವೆವು? ನಾವು ಯಥಾರ್ಥ ವಾಗಿ ಉತ್ತರಿಸಿದರೆ, ಗುಣಲಕ್ಷಣಗಳ ನಮ್ಮ ಯಾದಿಯು 1 ತಿಮೊಥೆ 3 ಮತ್ತು ತೀತ 1ರಲ್ಲಿ ಕಂಡು ಬರುವ ಅರ್ಹತೆಗಳೊಂದಿಗೆ ನಮಗೆ ಹೆಚ್ಚು ಹುದುವಾ ದವುಗಳು ಇರುವದಿಲ್ಲ.

ಇದರಿಂದ ನಾವು ಏನನ್ನು ತಿಳಿದು ಕೊಳ್ಳುತ್ತೇವೆ? 1 ತಿಮೊಥೆ 3 ಮತ್ತು ತೀತ 1ರಲ್ಲಿಯ ಅರ್ಹತೆಗಳು *ಒಂದು ನಿರ್ದಿಷ್ಟವಾದ ರೀತಿಯ ನಾಯಕತ್ವಕ್ಕಾಗಿ ಒಂದು ನಿರ್ದಿಷ್ಟವಾದ ರೀತಿಯ ಮನುಷ್ಯನನ್ನು ಆಯ್ಕೆ ಮಾಡಲು ಉದ್ದೇಶಿಸಲ್ಪಟ್ಟಿದ್ದವೆಂದು ತೀರ್ಮಾನಿಸುವುದು* ನಾಯಕತ್ವಕ್ಕಾಗಿ ಅಗತ್ಯವಾಗಿ ಅರ್ಹರಾಗಿರಬೇಕಾಗಿಲ್ಲ. ಮತ್ತು ಇತರ ರೀತಿಯ ನಾಯಕತ್ವಕ್ಕಾಗಿ ಅರ್ಹತೆಯುಳ್ಳವರು ಈ ರೀತಿಯ ನಾಯಕತ್ವಕ್ಕೆ ಅಗತ್ಯವಾಗಿ ಅರ್ಹರಾಗಿರ ಬೇಕಾಗಿಲ್ಲ, ಇದನ್ನು ಅರ್ಥಮಾಡಿಕೊಳ್ಳುವುದು ಎರಡು ರೀತಿಯ ತಪ್ಪುಗಳನ್ನು ಮಾಡದಿರುವದಕ್ಕೆ ಸಹಾಯ ಮಾಡುತ್ತದೆ: (1) ಇತರ ಕ್ಷೇತ್ರಗಳಲ್ಲಿ ನಾಯಕರಾಗಿರದೇ ಇರುವದರಿಂದ ಕೆಲವು ಜನರು ಅನರ್ಹರಾಗಿದ್ದಾರೆಂದು ಯೋಚಿಸುವುದು, (2) ಮತ್ತು ಕೆಲವು ಜನರು ಇತರ ಕ್ಷೇತ್ರಗಳಲ್ಲಿ ನಾಯಕರಾಗಿರುವದರಿಂದ ಅವರು ಅರ್ಹರಾಗಿರುವರು ಎಂದು ಯೋಚಿಸುವುದು.

## ಸಭಾಹಿರಿಯರನ್ನು ನೇಮಿಸುವುದು

ಸ್ಥಳೀಕ ಸಭೆಯಲ್ಲಿ ಹಿರಿಯರಾಗಿ ಸೇವೆ ಮಾಡಲು ಅರ್ಹತೆಯುಳ್ಳ ಜನರು ಆಯ್ಕೆ ಮಾಡಲ್ಪಟ್ಟು ನೇಮಿಸಲ್ಪಡುವಂತೆ ಯಾವ ವಿಧಾನವು ಅನುಸರಿಸಲ್ಪಡತಕ್ಕದ್ದು? ಹೊಸ ಒಡಂಬಡಿಕೆಯು ಒಂದು ವಿಷಯದಲ್ಲಿ ಒಬ್ಬ ಸುವಾರ್ತಿಕನು (ತೀತನು) ಹಿರಿಯರನ್ನು ಅಭಿಷೇಕಿಸಬೇಕು ಇಲ್ಲವೇ ಪ್ರತ್ಯೇಕಿಸಲ್ಪಡಬೇಕು ಎಂದು ಸೂಚಿಸುತ್ತದೆ (ತೀತ 1:5). ಮತ್ತು ಇನ್ನೊಂದು ಉದಾಹರಣೆಯಲ್ಲಿ ಒಬ್ಬ ಅಪೊಸ್ತಲನು ಹಾಗೂ ಅವನ ಜೊತೆ ಕೆಲಸದವನು (ಪೌಲ ಮತ್ತು ಬಾರ್ನಬ) ಹಿರಿಯರನ್ನು ಪ್ರತಿಷ್ಠಿಸಿದರು (ಅಪೊಸ್ತಲರ ಕೃತ್ಯಗಳು 14:23). ಹೀಗಿದ್ದರೂ, ಇದು ಈ ಜನರು ಹಿರಿಯರನ್ನು ನೇಮಿಸುವದರಲ್ಲಿ ಅನುಸರಿಸಿದ ಪ್ರತ್ಯೇಕ ವಾದ ವಿಧಿನಿಯಮವನ್ನು ಪ್ರಕಟಿಸುವದಿಲ್ಲ. ಬಹುಶಃ ವಿಧಾನದಲ್ಲಿ ಸಭೆಯನ್ನು ಒಳಗೊಳಿಸದೇ ಆ ಕೆಲಸಕ್ಕೆ ಹಿರಿಯರಾ ಗುವವರನ್ನು ಅವರು ತಮ್ಮಷ್ಟಕ್ಕೆ ತಾವೇ ತೀರ್ಮಾನಿಸಲಿಲ್ಲ ಮತ್ತು ನೇಮಿಸಲಿಲ್ಲ.

ಹಿರಿಯರು ಹೇಗೆ ಆಯ್ಕೆ ಮಾಡಲ್ಪಡಬೇಕು? ಹೊಸ ಒಡಂಬಡಿಕೆಯು ಆ ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರವನ್ನು ಕೊಡುವದಿಲ್ಲ. ಆದರೆ ಸಭೆಯಲ್ಲಿ ನಿರ್ದಿಷ್ಟವಾದ ಕೆಲಸಕ್ಕಾಗಿ ಜನರು ಪ್ರತ್ಯೇಕಿಸಲ್ಪಡುವ ಒಂದು ಉದಾಹರಣೆಯು, ಅಪೊಸ್ತಲರ ಕೃತ್ಯಗಳು 6ರಲ್ಲಿ ಅದನ್ನು ಒದಗಿಸುತ್ತದೆ. ಅಲ್ಲಿ ಈ ಸಂಗತಿಯು ಸಂಭವಿಸಿತು: (1) ಪಾತ್ರಗಳನ್ನು ತುಂಬಿಸಬೇಕಾದ ಜನರಿಗಾಗಿ ಅಪೊಸ್ತಲರ ಅರ್ಹತೆಗಳನ್ನು ಹೇಳಿದರು: "ಆಗ ಹನ್ನೆರಡು ಮಂದಿ ಅಪೊಸ್ತಲರು ಶಿಷ್ಯಮಂಡಲಿಯನ್ನು ಕೂಡಿಸಿ, ... ಸಂಭಾವಿತರೂ ಪವಿಶುದ್ಧಾತ್ಮಭರಿತರೂ ಜ್ಞಾನಸಂಪನ್ನರೂ ಆಗಿರುವ ಏಳು ಮಂದಿಯನ್ನು ನಿಮ್ಮೊಳಗಿಂದ ನೋಡಿ ಆರಿಸಿಕೊಳ್ಳಿರಿ; ಅವರನ್ನು ಈ ಕೆಲಸದ ಮೇಲೆ ನೇಮಿಸುವೆವು ಎಂದು ಹೇಳಿದರು" (ಅಪೊಸ್ತಲರ ಕೃತ್ಯಗಳು 6:2, 3). (2) ಸಭೆಯು ಇಡಿಯಾಗಿ ತಮ್ಮೊಳಗಿಂದ ಆ ಅರ್ಹತೆಗಳಿರುವವರನ್ನು ಆಯ್ಕೆಮಾಡಿತು: "ಈ ಮಾತು ಸರ್ವಮಂಡಲಿಗೆ ಒಳ್ಳೇದೆಂದು ತೋಚಿತು. ಮತ್ತು ಅವರು ... (ಏಳು ಜನರನ್ನು) ಆಯ್ಕೆ ಮಾಡಿದರು" (ಅಪೊಸ್ತಲರ ಕೃತ್ಯಗಳು 6:5). (3) ಅಪೊಸ್ತಲರು ಅವರ ಮೇಲೆ ತಮ್ಮ ಕೈಗಳನ್ನಿಟ್ಟು ಅವರ ಕಾರ್ಯಕ್ಕಾಗಿ ಅವರನ್ನು ನೇಮಿಸಿದರು: "ಅವರು ಅಪೊಸ್ತಲರ

ಮುಂದೆ ನಿಲ್ಲಿಸಲ್ಪಟ್ಟರು; ಮತ್ತು ಪ್ರಾರ್ಥನೆ ಮಾಡಿದ ನಂತರ, ಅವರು ಅವರ ಮೇಲೆ ತಮ್ಮ ಕೈಗಳನ್ನಿಟ್ಟರು" (ಅಪಸ್ತಲರ ಕೃತ್ಯಗಳು 6:6).

ಇಂದು ಹಿರಿಯರನ್ನು ಆಯ್ಕೆ ಮಾಡುವದಕ್ಕಾಗಿ ಹಾಗೆ ನೇಮಿಸುವದಕ್ಕಾಗಿ ಈ ಉದಾಹರಣೆಯು ಒಂದು ಒಳ್ಳೆಯ ವಿಧಾನವನ್ನು ಸೂಚಿಸುತ್ತದೆ: (1) ಪ್ರೇರಿತ ಅಪೊಸ್ತಲರಿಂದ ಅರ್ಹತೆಗಳು ಆಗಲೇ ನೇಮಿಸಲ್ಪಟ್ಟಿವೆ. (2) ಆ ಅರ್ಹತೆಗಳು ಬಹುಶಃ ಹಿರಿಯತನಕ್ಕಾಗಿ ಅರ್ಹತೆಗಳನ್ನು ಚರ್ಚಿಸುವ ಒಬ್ಬ ಸುವಾರ್ತಿಕನಿಂದ ಇಲ್ಲವೇ ಬೋಧಕನಿಂದ ಸಭೆಗೆ ಹೇಳಲ್ಪಡುತ್ತವೆ. ಕರ್ತನ ಮಂದೆಯನ್ನು ಕಾಯಲಿಕ್ಕೆ ಜನರನ್ನು ಆಯ್ಕೆ ಮಾಡಲು ಕೇಳಲ್ಪಡುವದಕ್ಕಿಂತ ಮೊದಲು ಸಭೆಯ ಸದಸ್ಯರು ಚೆನ್ನಾಗಿ ಬೋಧಿಸಲ್ಪಡುವ ಅಗತ್ಯತೆಯಿರುತ್ತದೆ. (3) ಆ ಅರ್ಹತೆಗಳನ್ನು ತನ್ನ ಸದಸ್ಯರಲ್ಲಿ ಯಾರು ಹೊಂದಿರುವರೆಂಬುದನ್ನು ತೀರ್ಮಾನಿಸುವಲ್ಲಿ ಇಡಿಯಾಗಿ ಸಭೆಗೆ ಭಾಗವಿರುತ್ತದೆ. ಹೊಸ ಒಡಂಬಡಿಕೆಯಲ್ಲಿಯ ಮಾರ್ಗದರ್ಶನಗಳನ್ನು ಅನುಸರಿಸಿ ಸಭೆಯು ತನ್ನ ನಾಯಕರನ್ನು ಆಯ್ಕೆ ಮಾಡಿಕೊಳ್ಳುತ್ತದೆ. (4) ಅನಂತರ ಹಿರಿಯರು ಬಹಿರಂಗ ಆರಾಧನೆಯಲ್ಲಿ ತಮ್ಮ ಕೆಲಸಕ್ಕೆ ಪ್ರತ್ಯೇಕಿಸಲ್ಪಡುತ್ತಾರೆ, ನೇಮಿಸಲ್ಪಡುತ್ತಾರೆ.

## ಮುಕ್ತಾಯ

*ಸಭಾ ಹಿರಿಯರನ್ನು ಆಯ್ಕೆ ಮಾಡುವದರಲ್ಲಿ ಹೆಚ್ಚಿನ ಗಮನವಹಿಸಲ್ಪಡಬೇಕು.* "ಒಬ್ಬನನ್ನು ತೆಗೆದು ಹಾಕುವದಕ್ಕಿಂತ" ಒಬ್ಬನನ್ನು ಹಿರಿಯನನ್ನಾಗಿ ಮಾಡುವುದು ಸುಲಭವಾಗಿದೆಯೆಂದು ಯಾರೋ ಒಬ್ಬರು ಹೇಳಿದ್ದಾರೆ. ಅರ್ಹತೆಯಿಲ್ಲದವನೆಂದು ಅನಂತರದಲ್ಲಿ ಕಂಡು ಕೊಳ್ಳಲ್ಪಡುವ ಒಬ್ಬ ಹಿರಿಯನನ್ನು ಹುದ್ದೆಯಿಂದ ತೆಗೆದು ಹಾಕುವುದು ಬಹಳ ಕಷ್ಟಕರವಾದದ್ದಾಗುತ್ತದೆ. ಮತ್ತು ಪ್ರಮುಖ ಸಭಾ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಒಬ್ಬ ಮನುಷ್ಯನು ಸಭಾ ಹಿರಿಯನಾಗಿ ನೇಮಿಸಲ್ಪಡುವ ಮೊದಲು ಅವನಲ್ಲಿ ಹೊಸ ಒಡಂಬಡಿಕೆಯ ಅರ್ಹತೆಗಳಿರುವವೋ ಎಂಬುದರ ಬಗ್ಗೆ ಪರಿಪೂರ್ಣ ಏಕಮತವಿರದಿದ್ದರೂ, ಹೆಚ್ಚಿನ ರೀತಿಯ ಒಪ್ಪಂದವಿರಲಿ. ಆಗಲೂ ಸಹ, ಅವನ ನೇಮಕದಿಂದ ಕ್ರಮೇಣವಾಗಿ ಸಮಸ್ಯೆಗಳು ಹುಟ್ಟುವ ಸಾಧ್ಯತೆಯು ಮುಂದಾಗಿ ತಿಳಿದು ಬಂದರೆ ಅವನು ನೇಮಿಸಲ್ಪಡಬಾರದು.

---

ಟಿಪ್ಪಣಿಗಳು

[1]ಹೆಚ್ಚಾದ ಬದಲೀ ಭಾಷಾಂತರಗಳು Curtis Vaughan, ed., *The New Testament From 26 Translations* (Grand Rapids, Mich.: Zondervan, 1967) ದಿಂದ ತೆಗೆದು ಕೊಳ್ಳಲ್ಪಟ್ಟಿವೆ. [2]Dick Marcear, "Who Can Serve as Elder?" *The Eastside Bulletin,* Eastside church of Christ, Midwest City, Okla. (21 October 1979). [3]James Wilburn, *Leadership for Christ in the Local Church* (Wichita Falls, Tex.: Faith Press, 1963), 20-54. [4]Kenneth O. Gangel, *Leadership for Church Education* (Chicago: Moody Press, 1970), 162, citing Charles E. Hendry and Murray G. Ross, *New Understandings of Leadership,* 43, 64-85. [5]ಜೇಮ್ಸ್ ವಿಲ್‌ಬರ್ನ್ ಅವರು *Leadership for Christ in the Local Church* ದಲ್ಲಿ ಬಹುಶಃ ಸ್ಥಳಿಕ ಸಭೆಯಲ್ಲಿ ಒಬ್ಬ ಸಭಾಹಿರಿಯನಾಗಲು ಅಗತ್ಯವಾದ ಅರ್ಹತೆಗಳ ಬಗ್ಗೆ ವ್ಯವಹರಿಸುತ್ತಿರುವದಿಲ್ಲ, ಆದರೆ ಒಬ್ಬನು ಈಗಾಗಲೇ ಅರ್ಹತೆಗಳ ಬಗ್ಗೆ ವ್ಯವಹರಿಸುತ್ತಿರುವದಿಲ್ಲ, ಆದರೆ ಒಬ್ಬನು ಈಗಾಗಲೇ ಸಭೆಯಲ್ಲಿ ನಾಯಕನಾಗಿದ್ದು ಬೆಳಸಿಕೊಳ್ಳಲು ಪ್ರಯತ್ನಿಸುವ ಅಗತ್ಯತೆಯುಳ್ಳ ಗುಣಗಳ ಬಗ್ಗೆ ಹೇಳಿದ್ದಾ ರೆಂಬುದು ಯೋಗ್ಯವಾಗಿದೆ.

## ಸಭಾ ಹಿರಿಯರು ಏನಾಗಿರತಕ್ಕದ್ದು, ಎಲ್ಲಾ ಕ್ರೈಸ್ತರು ಏನಾಗಿರತಕ್ಕದು

| ಹಿರಿಯರು | ಗುಣಲಕ್ಷಣ | ಎಲ್ಲಾ ಕ್ರೈಸ್ತರು |
|---|---|---|
| 1 ತಿಮೊಥೆ 3:2 | *ದೋಷಾರೋಪಣೆಯಿಲ್ಲದವರು (ನಿರ್ದೋಷಿ)* | 1 ತಿಮೊಥೆ 5:7; 6:14 |
| 1 ತಿಮೊಥೆ 3:2 | *ಸ್ವಸ್ಥ ಚಿತ್ತನು (ಎಚ್ಚರಿಕೆಯುಳ್ಳವನು)* | 1 ಪೇತ್ರ 1:13; 4:7; 5:8 |
| 1 ತಿಮೊಥೆ 3:2 | *ದೂರ ದೃಷ್ಟಿವುಳ್ಳವನು (ಸ್ವಸ್ಥ ಬುದ್ಧಿಯುಳ್ಳವನು)* | ತೀತ 2:2, 5; ರೋಮಾಪುರ 12:3 |
| 1 ತಿಮೊಥೆ 3:2 | *ಅತಿಥಿ ಸತ್ಕಾರ ಮಾಡುವವರು* | ರೋಮಾಪುರ 12:13; ಇಬ್ರಿಯ 13:2 |
| 1 ತಿಮೊಥೆ 3:2 | *ಬೋಧಿಸುವದರಲ್ಲಿ ಶಕ್ತರು* | ಇಬ್ರಿಯ 5:12 |
| 1 ತಿಮೊಥೆ 3:2 | *ಮದ್ಯಾಸಕ್ತಿಯಿಲ್ಲದವರು (ಕುಡುಕ ನಲ್ಲದವನು)* | ತೀತ 2:3; ಎಫೆಸ 5:18 |
| 1 ತಿಮೊಥೆ 3:3 | *ಸಾತ್ವಿಕರು (ತಾಳ್ಮೆಯುಳ್ಳವರು)* | ಫಿಲಿಪ್ಪಿ 4:5; ಕೊಲೊಸ್ಸೆ 3:13; ತೀತ 3:2 |
| 1 ತಿಮೊಥೆ 3:3 | *ಜಗಳವಾಡದವರು (ಕಲಹ ಪ್ರಿಯನಲ್ಲದವನು; ಕಾದಾಟವಾಡದವನು)* | ಯಾಕೋಬ 4:2; 2 ತಿಮೊಥೆ 2:24 |
| 1 ತಿಮೊಥೆ 3:3 | *ದ್ರವ್ಯಾಶೆಯಿಲ್ಲದವರು* | 1 ತಿಮೊಥೆ 6:10; 2 ತಿಮೊಥೆ 3:2 |
| 1 ತಿಮೊಥೆ 3:4 | *ವಿಧೇಯ, ಗೌರವ ತೋರಿಸುವ ಮಕ್ಕಳುಳ್ಳವರು* | ಎಫೆಸ 6:1-4 |
| 1 ತಿಮೊಥೆ 3:7 | *ಇತರರಿಂದ ಒಳ್ಳೆಯವನೆನಿಸಿಕೊಂಡವರು* | 1 ಪೇತ್ರ 2:12-16 |
| ತೀತ 1:8 | *ನ್ಯಾಯವಂತರು (ನೀತಿವಂತ)* | ಕೊಲೊಸ್ಸೆ 4:1 |
| ತೀತ 1:8 | *ದೇವ ಭಕ್ತರು (ಪರಿಶುದ್ಧರು)* | ಎಫೆಸ 4:24; 1 ತಿಮೊಥೆ 2:8 |
| ತೀತ 1:8 | *ಜಿತೇಂದ್ರಿಯರು (ಮಿತ)* | ಗಲಾತ್ಯ 5:23 |